ದಿನಗಳ ನಂತರ, ನಾಮದೇವನು ವಿಠಲನ ಭಜನೆ ಮಾಡುತ್ತ ಕುಳಿತಿದ್ದನು. ಪಕ್ಕದಲ್ಲಿ ಮಧ್ಯಾಹ್ನದ ಊಟಕ್ಕಾಗಿ ಒಂದು ರೊಟ್ಟಿ ಯನ್ನು ತಯಾರಿಸಿ ಇಟ್ಟುಕೊಂಡಿದ್ದನು. ಎಲ್ಲಿಂದಲೋ ಒಂದು ನಾಯಿ ಬಂದು ಅದನ್ನು ಕಚ್ಚಿಕೊಂಡು ಓಡತೊಡಗಿತು. ಇದನ್ನು ನೋಡಿ, ತುಪ್ಪದ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು ನಾಮದೇವನೂ ಅದನ್ನು ಹಿಂಬಾಲಿಸಿ ಓಡಿದನು. ''ಪ್ರಭೂ, ನನ್ನೊಡೆಯ! ಬರಿ ಒಣರೊಟ್ಟಿಯನ್ನು ಒಯ್ಯುತ್ತಿರುವೆಯಲ್ಲಾ! ಇದರ ಜೊತೆಗೆ ಸ್ವಲ್ಪ ತುಪ್ಪವನ್ನೂ ಸವರಿಕೊಳ್ಳಬಾರದೆ? ಆಗತಾನೇ ರುಚಿಯಾಗಿರುತ್ತದೆ'' ಎಂದು ಕೂಗುತ್ತಿದ್ದನು. ನಾಯಿಯು ತುಪ್ಪವನ್ನೂ ತಿಂದಿತೋ ಇಲ್ಲವೋ ಗೊತ್ತಿಲ್ಲ. ತನ್ನ ಗುರುವಿನ ಉಪದೇಶದಿಂದ ಭಗವಂತನು ಸರ್ವ ಜೀವಿಗಳ ಅಂತರ್ಯಾಮಿಯಾಗಿದ್ದಾನೆ ಎಂಬ ಪರಮ ಜ್ಞಾನವು ನಾಮದೇವನಿಗೆ ಪ್ರಾಪ್ತವಾಗಿತ್ತು ಎಂಬುದಂತೂ ಸತ್ಯ.

ನಾಮದೇವನು ಉತ್ತರಭಾರತದ ಪಂಜಾಬ್ ರಾಜ್ಯದಲ್ಲಿಯೂ ಕೆಲವು ವರ್ಷಗಳ ಕಾಲ ವಾಸವಾಗಿದ್ದನು ಎಂದು ಐತಿಹ್ಯ ಹೇಳುತ್ತದೆ. ಸಿಖ್ ಜನರು ಅವನನ್ನು ಒಬ್ಬ ಭಗವತ್ (ಮಹಾತ್ಮ) ಎಂದು ಪರಿಗಣಿಸಿ ಗೌರವಿಸುತ್ತಾರೆ. ಅಲ್ಲಿದ್ದಾಗಲೂ ನಾಮದೇವನು ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದನು. ಜನಗಳ ಮಧ್ಯೆ ಜನಪ್ರಿಯನಾಗಿದ್ದನು. ಅವನ ಹಲವಾರು ಅಭಂಗಗಳು ಸಿಖ್ ಧರ್ಮೀಯರ ಪವಿತ್ರಗ್ರಂಥವಾದ 'ಗುರು ಗ್ರಂಥ ಸಾಹಿಬ್' ನಲ್ಲಿ ಅಡಕವಾಗಿವೆ.

ನಾಮದೇವನ ಸುಮಾರು ನಾಲ್ಕುಸಾವಿರ ಅಭಂಗಗಳು ಇಂದಿಗೂ ಪ್ರಸಿದ್ಧವಾಗಿವೆ. ಮಹಾರಾಷ್ಟ್ರದ ಇನ್ನೊಬ್ಬ ಸಂತ ತುಕಾರಾಮನಂತೆ ಇವನೂ ಭಕ್ತರ ಮನಮಂದಿರದಲ್ಲಿ ಇಂದಿಗೂ ಪ್ರತಿಷ್ಠಿತನಾಗಿದ್ದಾನೆ. ಅವನ ಉಪದೇಶವನ್ನು ಹೀಗೆ ಸಂಗ್ರಹಿಸಬಹುದು:

''ಯಾವತ್ತೂ ಭಗವಂತನ ನಾಮವನ್ನು ಉಚ್ಚರಿಸುತ್ತ ಇರು. ಯಾವತ್ತೂ ಅವನನ್ನು ನೆನೆಯುತ್ತಿರು. ಯಾವತ್ತೂ ಭಗವಂತನನ್ನು ನಿನ್ನ ಹೃದಯದಲ್ಲಿ ಧ್ಯಾನಮಾಡುತ್ತಿರು. ಯಾವತ್ತೂ ನಿನ್ನ ಕೈಗಳಿಂದ ಭಗವಂತನ ಸೇವೆಯನ್ನು ಮಾಡುತ್ತಿರು. ನಿನ್ನ ಶಿರವನ್ನು ಅವನ ಪಾದಪದ್ಮಗಳಲ್ಲಿ ಇಡು. ಭಗವಂತನ ಕೀರ್ತನೆ ಮಾಡು. ಹೀಗೆ ಮಾಡಿದರೆ, ನಿನಗೆ ಹಸಿವು, ಬಾಯಾರಿಕೆಗಳು ಕಾಡುವುದಿಲ್ಲ. ಭಗವಂತನು ಯಾವತ್ತೂ ನಿನ್ನ ಸಮೀಪದಲ್ಲಿಯೇ ಇದ್ದಾನೆ. ನೀನು ಅಮೃತತ್ವವನ್ನು ಹೊಂದುವೆ; ಅನಂತ ಆನಂದವನ್ನು ಹೊಂದುವೆ.''

೧೩೫೦ನೆಯ ಇಸವಿ. ನಾಮದೇವನಿಗೆ ಈಗ ಎಂಬತ್ತು ವರ್ಷ ವಯಸ್ಸು. ತನ್ನ ಇಹಲೋಕದ ಬಾಳುವೆಯನ್ನು ಕೊನೆಗೊಳಿಸಲು ಅವನು ನಿರ್ಧರಿಸಿದನು. ತನ್ನ ಪ್ರಾಣಪ್ರಿಯನಾದ ವಿಠಲನ ದೇವಸ್ಥಾನದ ಮುಖ್ಯದ್ವಾರದಲ್ಲಿಯೇ ದೇಹವನ್ನು ತ್ಯಜಿಸಿದನು. ವಿಠಲನೊಡನೆ ಕೂಡಿಕೊಂಡು ಅಮರನಾದನು.

## ಕದಿಯಲಾಗದ ಸಂಪತ್ತು

ಶ್ರೀಪುರ ಎಂಬ ಊರು. ಅಲ್ಲೊಬ್ಬ ಪಂಡಿತ. ವಿದ್ಯಾವಿನಯ ಸಂಪನ್ನ. ರಾಜ ದರ್ಬಾರಿನಲ್ಲಿ ಅವನಿಗೆ ವಿಶೇಷವಾದ ಸ್ಥಾನವಿತ್ತು. ಜನರಲ್ಲೂ ಬಹು ಮಾನ್ಯನಾಗಿದ್ದ.

ಒಮ್ಮೆ ಆ ಊರಿಗೆ ಒಬ್ಬ ಸಂತರು ಬಂದರು. ಈ ಪಂಡಿತ ಅವರನ್ನು ಭೇಟಿ ಮಾಡಿ, ''ಸ್ವಾಮೀ, ತಾವು ಜ್ಞಾನಿಗಳು. ತಮ್ಮಂತಹವರು ನಮ್ಮ ಮನೆಗೆ ಬರಬೇಕು. ರಾಜನಲ್ಲೂ ಇಲ್ಲದಂತಹ ನನ್ನ ಸಂಪತ್ತನ್ನು ನೋಡಿ ಹೋಗಬೇಕು'' ಎಂದು ಬೇಡಿಕೊಂಡನು. ಸಂತರು ಒಪ್ಪಿ ಆತನ ಮನೆಗೆ ಹೋಗಿ, ಅವನ ಸಂಪತ್ತನ್ನು ನಿಧಾನವಾಗಿ ನೋಡಿ, ಸಂತೋಷಪಟ್ಟರು.

ಇವರಿಬ್ಬರ ಮಾತುಕತೆ ಆ ರಾಜ್ಯದ ಮಂತ್ರಿಯ ಕಿವಿಗೆ ಬಿತ್ತು. ನೋಡಲು ಇಷ್ಟೊಂದು ಬಡವನಂತೆ ಕಾಣುವ ಪಂಡಿತನ ಮನೆಯಲ್ಲಿ ಅದೆಷ್ಟು ಸಂಪತ್ತಿದೆಯೋ ನೋಡೇ ಬಿಡಬೇಕು ಎಂದುಕೊಂಡ ಮಂತ್ರಿ. ಆ ರಾತ್ರಿ ಅವನು ಪಂಡಿತನ ಮನೆಯ ಹತ್ತಿರ ಹೋದ. ಅದೇ ವೇಳೆಗೆ ಪಂಡಿತ ತನ್ನ ಹೆಂಡತಿಗೆ ''ಮೈಲೇಲಿನ ಬಟ್ಟೆಯನ್ನೂ ಬಿಡದೆ ಕದಿಯುವ ಕಳ್ಳರಿದ್ದಾರೆ. ನಮ್ಮ ಅಮೂಲ್ಯ ಸಂಪತ್ತಿರುವ ಪೆಟ್ಟಿಗೆಗೆ ಬೀಗ ಹಾಕಿದೆ ತಾನೆ?'' ಎಂದು ಕೇಳುತ್ತಿದ್ದ.

''ಕರಗದ ಸೊರಗದ ಆ ಸಂಪತ್ತನ್ನು ಕಂಡೇ ನಾನು ನಿಮ್ಮನ್ನು ಮದುವೆಯಾದೆ. ಅದನ್ನು ಕಾಯುವುದು ನನ್ನ ಕರ್ತವ್ಯ'' ಎಂದಳಾಕೆ.

ತಾನು ಕೇಳಿದ್ದೂ ಸುಳ್ಳಲ್ಲ ಕಂಡದ್ದೂ ಸುಳ್ಳಲ್ಲ ಎಂದುಕೊಂಡ ಮಂತ್ರಿ ನೇರವಾಗಿ ರಾಜನ ಬಳಿಗೆ ಹೋಗಿ ''ನಿಮ್ಮ ರಾಜ್ಯದಲ್ಲೇ ತಿಂದು, ಉಂಡು, ನಿಮ್ಮ ಮನೆಗೇ ಕನ್ನ ಹಾಕಿ, ಈ ಪಂಡಿತ ಅಪಾರ ಸಂಪತ್ತನ್ನು ಸಂಗ್ರಹಿಸಿಟ್ಟುಕೊಂಡಿದ್ದಾನೆ'' ಎಂದು ದೂರಿತ್ತ.

ರಾಜ ಪಂಡಿತನನ್ನು ಕರೆಸಿ ''ನಿಜ ಹೇಳು, ಅಕ್ರಮ ಸಂಪತ್ತು ನಿನ್ನ ಬಳಿ ಇದ್ದರೆ ಸೆರೆಮನೆಗೆ ತಳ್ಳುತ್ತೇನೆ'' ಎಂದು ಬೆದರಿಸಿದ. ಅದಕ್ಕೆ ಪಂಡಿತ ''ಹೌದು ಮಹಾಸ್ವಾಮಿ, ನನ್ನ ಬಳಿ ಅಪಾರವಾದ ಸಂಪತ್ತು ಇರುವುದೇನೋ ನಿಜ. ಅದನ್ನು ತಾವೂ ಒಮ್ಮೆ ಪರಾಂಬರಿಸಿ ನೋಡಿ, ಅಮೇಲೆ ಯಾವ ಶಿಕ್ಷೆ ವಿಧಿಸಿದರೂ ನಾನು ಅನುಭವಿಸಲು ಸಿದ್ಧ'' ಎಂದ.

ರಾಜ ಮಂತ್ರಿ ಪರಿವಾರ ಸಮೇತ ಪಂಡಿತನ ಮನೆಗೆ ಹೋಗಿ, ಬೀಗ ಹಾಕಿದ್ದ ಪೆಟ್ಟಿಗೆಯನ್ನು ತೆಗೆಸಿ ನೋಡಿದ. ಅದರ ತುಂಬಾ ಅಮೂಲ್ಯವಾದ ಪುಸ್ತಕಗಳು ತುಂಬಿದ್ದವು. ಪಂಡಿತನ ತಾತ, ಮುತ್ತಾತಂದಿರ ಕಾಲದಿಂದಲೂ ಸಂಗ್ರಹಿಸಿಟ್ಟಿದ್ದ ಅಮೂಲ್ಯ ಜ್ಞಾನಭಂಡಾರ ಅದಾಗಿತ್ತು. ರಾಜನಿಗೆ ತುಂಬಾ ಆಶ್ಚರ್ಯವಾಯಿತು.

ಪಂಡಿತ ''ಇದೇ ಸ್ವಾಮಿ, ನನ್ನ ಸಂಪತ್ತು. ಎಂದಿಗೂ ಕರಗದ, ಯಾರೂ ಕದಿಯಲಾಗದ ಸಂಪತ್ತು. ಇದನ್ನೇ ನಾನು ನನ್ನ ಮುಂದಿನ ಪೀಳಿಗೆಗಾಗಿ ಕಾಪಿಡುತ್ತಿರುವುದು. ಇದನ್ನೇ ನೀವು ಆಕ್ರಮ ಸಂಪತ್ತು ಎಂದುಕೊಂಡಿರುವುದು'' ಎಂದು.

ರಾಜ ಪಶ್ಚಾತ್ತಾಪದಿಂದ ಪಂಡಿತನ ಕ್ಷಮೆ ಯಾಚಿಸಿದ. ಅದಕ್ಕೇ –

**ನ ಚೋರಹಾರ್ಯಂ ನ ರಾಜಹಾರ್ಯಂ ನ ಭ್ರಾತೃಭಾಜ್ಯಂ ನ ಚ ಭಾರಕಾರೀ
ವ್ಯಯೇ ಕೃತೇ ವರ್ಧತ ಏವ ವಿದ್ಯಾ ವಿದ್ಯಾಧನಂ ಸರ್ವಧನಪ್ರಧಾನಮ್॥**


– ಎನ್ನುವುದು. ಅಂದರೆ ಕಳ್ಳರು ಕದಿಯಲಾಗದ್ದು, ರಾಜ ವಶಪಡಿಸಿಕೊಳ್ಳಲಾಗದ್ದು, ಅಣ್ಣ ತಮ್ಮಂದಿರು ಹಂಚಿಕೊಳ್ಳಲಾಗದ್ದು, ಭಾರ ಎನಿಸದಂತದ್ದು, ಖರ್ಚು ಮಾಡಿದಷ್ಟೂ ಹೆಚ್ಚುತ್ತಲೇ ಹೋಗುವ ವಿದ್ಯೆ ಎಂಬ ಧನ ಎಲ್ಲ ಸಂಪತ್ತಿಗಿಂತಲೂ ಮಿಗಿಲು ಎಂದರ್ಥ.

*– ಎಚ್. ಎಲ್.ಸೀತಾದೇವಿ, ('ಕಥೆಗೊಂದು ಸುಭಾಷಿತ –೨', ಗ್ರಂಥದಿಂದ, ೨೦೧೩, ವಿಕ್ರಂ ಪ್ರಕಾಶನ, ಬೆಂಗಳೂರು)*


# ನ್ಯಾಯವನ್ನು ಎತ್ತಿ ಹಿಡಿದ ಸಹೋದರರು

**ಮೂಲ:** ಮಹಾಭಾರತ **ನಿರೂಪಣೆ:** ರೇವತಿ **ಚಿತ್ರ:** ಶಂಕರ್


**1** ಶಂಖ ಮತ್ತು ಲಿಖಿತ ಎಂಬ ಇಬ್ಬರು ಒಳ್ಳೆಯ ಸಹೋದರರಿದ್ದರು. ಅವರಿಬ್ಬರೂ ಬಾಹುದಾ ನದೀತೀರದಲ್ಲಿ ಪ್ರತ್ಯೇಕವಾಗಿ ಆಶ್ರಮ ಕಟ್ಟಿ ತಪಸ್ಸು ಮಾಡುತ್ತಿದ್ದರು.





**2**




**3** ಒಂದು ದಿನ ಬಿಸಿಲಿನ ಬೇಗೆ ಅಧಿಕವಾಗಿತ್ತು ...




4
ಇನ್ನೂ ನನ್ನಣ್ಣ ಮರಳಿ ಬರಲಿಲ್ಲ. ನನಗೆ ಹಸಿವೆ, ಬಾಯಾರಿಕೆ ತಡೆಯಲಾಗುತ್ತಿಲ್ಲ. ಇಲ್ಲಿ ಒಳ್ಳೆಯ ಮಾವಿನ ಹಣ್ಣುಗಳಿವೆ. ಇದು ನನ್ನ ಅಣ್ಣನ ತೋಟವಲ್ಲವೆ ? ಒಂದೆರಡನ್ನು ಕೊಯ್ದು ತಿನ್ನುತ್ತೇನೆ.
5
ಅಷ್ಟರಲ್ಲಿ ಶಂಖ ಮರಳಿ ಬಂದ. ತಮ್ಮ ಲಿಖಿತನು ತನ್ನ ತೋಟದಿಂದ ಮಾವಿನ ಹಣ್ಣನ್ನು ಕೊಯ್ದು ತಿನ್ನುತ್ತಿದ್ದುದು ಅವನಿಗೆ ಕಾಣಿಸಿತು. ಅವನಿಗೆ ಬೇಸರವಾಯಿತು.
ಅಣ್ಣಾ! ಈ ಮಾವಿನ ಹಣ್ಣುಗಳು ತುಂಬಾ ಸಿಹಿಯಾಗಿವೆ.
ಲಿಖಿತ ! ಇನ್ನೊಬ್ಬನಿಗೆ ಸೇರಿದ ತೋಟದಿಂದ ಅವನಿಲ್ಲದಾಗ ಮಾವಿನ ಹಣ್ಣು ಕಿತ್ತು ತಿನ್ನುವುದು ಕಳ್ಳತನವಲ್ಲವೇ ಹೇಳು ?
6
ಹೌದಣ್ಣಾ, ಅದು ಕಳ್ಳತನವೇ. ನನಗೆ ಹಸಿವಾದಾಗ ನಾನು ಅದನ್ನೆಲ್ಲ ಆಲೋಚಿಸಲಿಲ್ಲ. ಈ ತಪ್ಪಿಗಾಗಿ ನೀನು ಏನು ಶಿಕ್ಷೆ ನೀಡಿದರೂ ನಾನು ಅದನ್ನು ಸ್ವೀಕರಿಸುತ್ತೇನೆ.
ನಿನ್ನನ್ನು ರಾಜನ ಬಳಿಗೆ ಕಳುಹಿಸುತ್ತೇನೆ. ಈ ತಪ್ಪಿಗೆ ತಕ್ಕ ಶಿಕ್ಷೆಯನ್ನು ರಾಜನೇ ವಿಧಿಸಲಿ.
7
ರಾಜನ ಸುದ್ಯುಮ್ನನ ಆಸ್ಥಾನದಲ್ಲಿ ....
ತುಂಬ ವಿಚಿತ್ರವಾದ ಸಮಸ್ಯೆ ಇದು. ಅಣ್ಣನ ತೋಟದಿಂದ ಮಾವಿನ ಹಣ್ಣನ್ನು ಕದ್ದ ತಪ್ಪಿಗಾಗಿ ತಮ್ಮನಿಗೆ ಶಿಕ್ಷೆ ವಿಧಿಸುವುದು! ತಮ್ಮನಿಗೆ ಅಷ್ಟು ಸ್ವಾತಂತ್ರ್ಯವಿಲ್ಲವೆ ?


8
ಹಣ್ಣನ್ನು ತಿನ್ನುವ ಮೊದಲು ತಮ್ಮನು ಅಣ್ಣನ ಅನುಮತಿ ಪಡೆಯಬೇಕಿತ್ತು. ಅನುಮತಿ ಪಡೆಯದೆ ತಿಂದದ್ದರಿಂದ ಅದು ಕಳ್ಳತನವೇ ಆಗಿದೆ. ಇದಕ್ಕೆ ಶಿಕ್ಷೆ ವಿಧಿಸುವುದು ನಿನ್ನ ಕರ್ತವ್ಯ.
ಶಹಬಾಸ್ ಲಿಖಿತ ! ನಿನ್ನಂಥ ತಮ್ಮನ್ನನ್ನು ಪಡೆಯಲು ಶಂಖನು ತನ್ನ ಹಿಂದಿನ ಜನ್ಮದಲ್ಲಿ ತುಂಬಾ ಪುಣ್ಯಸಂಪಾದನೆ ಮಾಡಿರಬೇಕು.
9
ಮಹಾರಾಜ ! ಶಂಖನಂಥ ಅಣ್ಣನನ್ನು ಪಡೆದ ನಾನೇ ಅದೃಷ್ಟಶಾಲಿ.
ಲಿಖಿತ, ನಾನು ನಿನ್ನನ್ನು ಕ್ಷಮಿಸಿದ್ದೇನೆ. ನೀನು ಮಾಡಿದ್ದರಲ್ಲಿ ನಿನ್ನ ತಪ್ಪೇನೂ ಇಲ್ಲ. ಅಲ್ಲದೆ, ಶಿಕ್ಷೆ ವಿಧಿಸುವುದು ಹೇಗೆ ರಾಜನ ಕರ್ತವ್ಯವೋ ಹಾಗೆಯೇ ಕ್ಷಮಿಸುವುದೂ ಕೂಡ. ನಿನ್ನನ್ನು ಬಿಡುಗಡೆ ಮಾಡಿದ್ದೇನೆ. ನೀನು ಮುಕ್ತನಾಗಿ ಎಲ್ಲಿಗೆ ಬೇಕಾದರೂ ಹೋಗಬಹುದು.
10
ಓ ರಾಜ ! ನಿನ್ನ ಕ್ಷಮೆಯನ್ನು ನಾನು ಸ್ವೀಕರಿಸಲಾರೆ. ಅಪರಾಧಿಯಾದ ನಾನೇ ಶಿಕ್ಷೆಯನ್ನು ಅನುಭವಿಸಲು ಬಯಸುತ್ತಿರುವಾಗ ಕ್ಷಮಿಸುವ ಪ್ರಶ್ನೆಯೇ ಏಳದು. ನಾಳೆ ಬೇರೆ ಯಾರಾದರೂ ಇದೇ ರೀತಿ ಅಪರಾಧವನ್ನು ಮಾಡಿದರೆ, ಅವನನ್ನೂ ನೀನು ಕ್ಷಮಿಸುತ್ತೀಯಾ? ಆಗ ನೀನು ಅನ್ಯಾಯ, ಪಕ್ಷಪಾತಗಳಿಗೆ ಕಾರಣನಾಗುವೆಯಲ್ಲವೆ? ದಯವಿಟ್ಟು ನನ್ನ ತಪ್ಪಿಗೆ ನೀನು ಯೋಗ್ಯವಾದ ಶಿಕ್ಷೆಯನ್ನು ಕೊಡು.
ರಾಜ ಒಂದು ಕ್ಷಣ ಆಲೋಚಿಸಿದ.
ಕೈಗಳನ್ನು ಕತ್ತರಿಸುವುದೇ ಕಳ್ಳತನಕ್ಕೆ ಯೋಗ್ಯವಾದ ಶಿಕ್ಷೆ. ನಾನು ಲಿಖಿತನಿಗೆ ಈ ಶಿಕ್ಷೆಯನ್ನು ತುಂಬ ನೋವಿನಿಂದ ನೀಡುತ್ತಿದ್ದೇನೆ.
11
ರಾಜನ ತೀರ್ಮಾನದಂತೆ ಲಿಖಿತನಿಗೆ ಶಿಕ್ಷೆ ವಿಧಿಸಲಾಯಿತು.
ತಮ್ಮಾ, ಕೈಗಳನ್ನು ಕಳೆದುಕೊಂಡದ್ದರಿಂದ ನಿನಗೆ ದುಃಖವಾಗುತ್ತಿಲ್ಲವೆ ?
ಇಲ್ಲಣ್ಣಾ, ನನಗೆ ಹೆಮ್ಮೆಯೆನಿಸುತ್ತದೆ. ನಾನು ಧರ್ಮವನ್ನು ಬಿಟ್ಟು ನಡೆದದ್ದರಿಂದ ಉಂಟಾದ ನಷ್ಟವನ್ನು ಇದರಿಂದ ತುಂಬಿದಂತಾಗಿದೆ.
ತಮ್ಮಾ, ನನಗೂ ನಿನ್ನ ವಿಷಯವಾಗಿ ಹೆಮ್ಮೆಯೆನಿಸುತ್ತಿದೆ. ಬಾಹುದಾ ನದಿಯಲ್ಲಿ ಸ್ನಾನ ಮಾಡಿ, ದೇವ, ಋಷಿ, ಪಿತೃಗಳಿಗೆ ತರ್ಪಣ ಕೊಟ್ಟು ಬಾ. ಅನಂತರ ನಾವು ಊಟ ಮಾಡೋಣ.